ಕರ್ನಾಟಕ ಸರ್ಕಾರ
ರೇಷ್ಮೆ ಇಲಾಖೆ

ಸಂ.ಯೋಜನೆ/ಪಿಎಸ್1/ಮಾರ್ಗಸೂಚಿ/17/2016-17

ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು
ಹಾಗೂ ರೇಷ್ಮೆ ನಿರ್ದೇಶಕರ ಕಚೇರಿ,
ಬೆಂಗಳೂರು, ದಿನಾಂಕ:6.6.2016.

ಸುತ್ತೋಲೆ

ವಿಷಯ: 2016-17ನೇ ಸಾಲಿನಲ್ಲಿ ವಿವಿಧ ಯೋಜನೆಗಳಡಿ ಸೌಲಭ್ಯಗಳನ್ನು ಒದಗಿಸಲು ಫಲಾನುಭವಿಗಳ ಆಯ್ಕೆ ಕುರಿತು.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ: ತೋಇ/75/ರೇಕೃವಿ/2016, ದಿನಾಂಕ 10.5.2016.
2. ಈ ಕಚೇರಿ ಸುತ್ತೋಲೆ ಸಂ: ಪಿಎಸ್3/ ಎಸ್‌ಸಿಪಿ/ ಟಿಎಸ್‌ಪಿ/ಅಸಸಭೆ/138/13-14, ದಿ. 26.2.2014.
3. ಈ ಕಚೇರಿ ಸುತ್ತೋಲೆ ಸಂ: ಪಿಎಸ್1/15-16/ ವಾಯೋ/ 200/14-15, ದಿ. 13.7.2015.

ರೇಷ್ಮೆ ಕೃಷಿ ಅಭಿವೃದ್ಧಿ ಯೋಜನೆಯಲ್ಲಿ ರೇಷ್ಮೆ ಕೃಷಿಕರು ಮತ್ತು ರೇಷ್ಮೆ ನೂಲು ಬಿಚ್ಚಾಣಿಕೆದಾರರಿಗೆ ವಿವಿಧ ಸೌಲಭ್ಯ / ಸವಲತ್ತು ವಿತರಿಸಲು ಸರ್ಕಾರವು ವಿವಿಧ ಕಾರ್ಯಕ್ರಮಗಳಿಗೆ ಉಲ್ಲೇಖ(1)ರಲ್ಲಿ ಅನುಮೋದನೆ ನೀಡಿದೆ. ರೇಷ್ಮೆ ಕೃಷಿಯಲ್ಲಿ ನಿರತರಾಗಿರುವ ರೇಷ್ಮೆ ಕೃಷಿಕರು / ರೇಷ್ಮೆ ನೂಲು ಬಿಚ್ಚಾಣಿಕೆದಾರರ ಹಾಗೂ ರೇಷ್ಮೆ ಕೃಷಿ ಸಂಬಂಧಿತ ಇತರೆ ಫಲಾನುಭವಿಗಳಿಗೆ ಅಗತ್ಯ ಸೌಲಭ್ಯಗಳನ್ನು ಒದಗಿಸಲು ವಿವಿಧ ಜಿಲ್ಲಾ/ ತಾಲ್ಲೂಕುಗಳ, ತಾಂತ್ರಿಕ ಸೇವಾ ಕೇಂದ್ರಗಳ ಮೂಲಕ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ವಿವಿಧ ಕಾರ್ಯಕ್ರಮಗಳ ಅನುಷ್ಠಾನದ ಮುಖ್ಯ ಉದ್ದೇಶಗಳು ಈ ಕೆಳಗಿನಂತಿವೆ :

- ಗುಣಮಟ್ಟದ ಕಚ್ಚಾ ರೇಷ್ಮೆ ಉತ್ಪಾದನೆ.
- ನೂತನ ತಾಂತ್ರಿಕತೆ ಅಳವಡಿಕೆಗೆ ಪೂರಕವಾಗಿ ವಿಸ್ತರಣಾ ಚಟುವಟಿಕೆ ಸದೃಡಗೊಳಿಸುವುದು ಮತ್ತು ಸವಲತ್ತು/ಸೌಲಭ್ಯಗಳನ್ನು ವಿತರಿಸುವುದು.

ಇದರಂತೆ ಅರ್ಹ ಫಲಾನುಭವಿಗಳಿಗೆ, ರೇಷ್ಮೆ ಕೃಷಿ / ರೀಲಿಂಗ್ ಚಟುವಟಿಕೆಗಳಲ್ಲಿ ಮೂಲಭೂತ ಸೌಕರ್ಯಗಳ ಕುರಿತಾಗಿ ಲಭ್ಯವಿರುವ ಅನುದಾನದಲ್ಲಿ ಹೆಚ್ಚಿನ ಸಂಖ್ಯೆಯ ಫಲಾನುಭವಿಗಳಿಗೆ ಸೌಲಭ್ಯಗಳನ್ನು ವಿತರಿಸುವುದು ಕಾರ್ಯಕ್ರಮಗಳ ಅನುಷ್ಠಾನದ ಮುಖ್ಯ ಧ್ಯೇಯೋದ್ದೇಶವಾಗಿದೆ.

ಈ ನಿಟ್ಟಿನಲ್ಲಿ ಇಲಾಖಾ ಕಾರ್ಯಕ್ರಮಗಳಡಿ ಫಲಾನುಭವಿಗಳಿಗೆ ಸೌಲಭ್ಯಗಳನ್ನು ಒದಗಿಸಲು ಸರ್ಕಾರದ ಸೂಚನೆಯಂತೆ ಫಲಾನುಭವಿಗಳ ಆಯ್ಕೆ ಮಾಡುವ ಪ್ರಕ್ರಿಯೆ ಕುರಿತಂತೆ ಉಲ್ಲೇಖ(2)ಮತ್ತು (3)ರಲ್ಲಿ ಸೂಚನೆ ನೀಡಲಾಗಿತ್ತು. ಮುಂದುವರೆದು 2016-17ನೇ ಸಾಲಿನಲ್ಲಿ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಅರ್ಹ ರೇಷ್ಮೆ ಕೃಷಿಕರು / ರೇಷ್ಮೆ ನೂಲು ಬಿಚ್ಚಾಣಿಕೆದಾರರಿಗೆ ಸವಲತ್ತುಗಳನ್ನು ಒದಗಿಸಲು ಕಾರ್ಯಕ್ರಮದಡಿಯಲ್ಲಿ ಫಲಾನುಭವಿಗಳನ್ನು ಗುರುತಿಸಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಕುರಿತಾದ ಮುಂದುವರೆದ ಮಾರ್ಗಸೂಚಿಗಳನ್ನು ಈ ಕೆಳಗಿನಂತೆ ನೀಡಲಾಗಿದೆ.

- ರೇಷ್ಮೆ ಕೃಷಿ ಅಭಿವೃದ್ಧಿ ಯೋಜನಾ ಸವಲತ್ತು ವಿತರಿಸುವ ಮುನ್ನ ರೇಷ್ಮೆ ಕೃಷಿಯಲ್ಲಿ ತೊಡಗಿರುವ ರೇಷ್ಮೆ ಬೆಳೆಗಾರರಿಗೆ / ಬಿತ್ತನೆ ಬೆಳೆಗಾರರಿಗೆ / ರೀಲರ್‌ಗಳಿಗೆ /RSPಗಳಿಗೆಸಂಬಂಧಿಸಿದ ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿಗಳು ನಿಯಮಾನುಸಾರ ನೋಂದಣಿ ಮಾಡಿಕೊಂಡು ಪಾಸ್ ಪುಸ್ತಕ ವಿತರಿಸುವುದು ಕಡ್ಡಾಯವಾಗಿದೆ.

- ಮೂಲಭೂತ ಸೌಕರ್ಯಗಳಲ್ಲಿ ಫಲಾನುಭವಿ ಈಗಾಗಲೇ ಪಡೆದಿರುವ ಸವಲತ್ತನ್ನು ಹೊರತುಪಡಿಸಿ ಉಳಿದ ಸೌಲಭ್ಯಗಳನ್ನು ಒದಗಿಸುವುದು.

2016–17ನೇ ಸಾಲಿನಲ್ಲಿ ವಿವಿಧ ಫಲಾನುಭವಿ ಆಧಾರಿತ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಲು ಈ ಕೆಳಕಂಡ ಮಾನದಂಡಗಳನ್ನು ಅನುಸರಿಸುವುದು.

| ಕ್ರಸಂ | ಸೌಲಭ್ಯ ಪಡೆಯಲು ಅರ್ಹ ಫಲಾನುಭವಿಗಳು | ಫಲಾನುಭವಿಗಳ ಆಯ್ಕೆಗೆ ಮಾನದಂಡ |
|---|---|---|
| 1 | ನೋಂದಾಯಿತ ರೇಷ್ಮೆ ಬೆಳೆಗಾರರು | • ಹಿಪ್ಪುನೇರಳೆ ನಾಟಿ ಮತ್ತು ರೇಷ್ಮೆ ಹುಳು ಸಾಕಾಣಿಕೆಯಲ್ಲಿ ಆಸಕ್ತಿಯುಳ್ಳ ರೈತರನ್ನು ಆಯ್ಕೆ ಮಾಡಬೇಕು.<br>• ಆಯ್ಕೆ ಮಾಡಲಾದ ಫಲಾನುಭವಿಯು ಸ್ವಂತ ಜಮೀನು ಹೊಂದಿರಬೇಕು.<br>• ಸಾಂಪ್ರದಾಯಕ ಹಿಪ್ಪುನೇರಳೆ ತಳಿ ತೆಗೆದು ಹೆಚ್ಚಿನ ಇಳುವರಿ ನೀಡುವ ಹೊಸ ತಳಿಗೆ ಬದಲಾಯಿಸುವ ರೇಷ್ಮೆ ಕೃಷಿಕರಿಗೆ ಆದ್ಯತೆ ನೀಡಬೇಕು.<br>• ಹೆಚ್ಚಿನ ಅಂತರ ಸಾಲುಗಳ ಹಿಪ್ಪುನೇರಳೆ ಕೃಷಿ ಕೈಗೊಳ್ಳಲು ಸಿದ್ದರಿರಬೇಕು.<br>• ನೂತನ ತಾಂತ್ರಿಕತೆಗಳನ್ನು ಅಳವಡಿಸಿಕೊಳ್ಳಲು ಆಸಕ್ತಿಹೊಂದಿರಬೇಕು. |
| 2 | ನೋಂದಾಯಿತ ರೀಲರುಗಳು | • ರೇಷ್ಮೆ ನೂಲು ಬಿಚ್ಚಾಣಿಕೆಯಲ್ಲಿ ಆಸಕ್ತಿ ಹೊಂದಿರಬೇಕು.<br>• ರೀಲಿಂಗ್ ಘಟಕಗಳಾದ ಚರಕಾ, ಕಾಟೇಜ್, ಫಿಲೇಚರ್ ಬೇಸಿನ್, ಮಲ್ಟಿ ಎಂಡ್, ಸ್ವಯಂ ಚಾಲಿತ ರೀಲಿಂಗ್ ಘಟಕಗಳಲ್ಲಿ ಯಾವುದಾದರು ಹೊಂದಿರಬೇಕು.<br>• ಹೊಸದಾಗಿ ರೀಲಿಂಗ್ ಯಂತ್ರಗಳನ್ನು ಸ್ಥಾಪಿಸಲು ಇಚ್ಛಿಸುವ ರೀಲರ್‌ಗಳು ಸ್ವಂತ /ಧೀರ್ಘಕಾಲಿಕ ಲೀಸ್ ಮೇಲೆನಿವೇಶನ ಅಥವಾ ಕಟ್ಟಡ ಹೊಂದಿರಬೇಕು. |

| ಕ್ರಸಂ | ಸೌಲಭ್ಯ ಪಡೆಯಲು ಅರ್ಹ ಫಲಾನುಭವಿಗಳು | ಫಲಾನುಭವಿಗಳ ಆಯ್ಕೆಗೆ ಮಾನದಂಡ |
|---|---|---|
| 3 | ನೋಂದಾಯಿತ ಮೊಟ್ಟೆ ಉತ್ಪಾದಕರು | • ನಿಯಮಾನುಸಾರ ನೋಂದಣಿಯಾಗಿರಬೇಕು, ನೋಂದಣಿ ಷರತ್ತುಗಳನ್ನು ಪಾಲಿಸಲು ಬದ್ಧರಾಗಿರಬೇಕು. |
| 4 | ನೋಂದಾಯಿತ ಚಾಕಿ ಸಾಕಾಣಿಕೆದಾರರು | • ನಿಯಮಾನುಸಾರ ನೋಂದಣಿಯಾಗಿರಬೇಕು, ನೊಂದಣಿ ಷರತ್ತುಗಳನ್ನು ಪಾಲಿಸಲು ಬದ್ಧರಾಗಿರಬೇಕು. |
| 5 | ರೀಲರ್ ಸಹಕಾರ ಸಂಘಗಳು / ರೇಷ್ಮೆ ಕೃಷಿಗೆ ಸಂಬಂಧಿಸಿದಂತೆ ಇತರೆ ಸಂಘ ಸಂಸ್ಥೆಗಳು | • ನಿಯಮಾನುಸಾರ ನೋಂದಣಿಯಾಗಿರಬೇಕು, ಸಹಕಾರ ಇಲಾಖೆಯ ಕಾಯಿದೆ ಮತ್ತು ರೇಷ್ಮೆ ಇಲಾಖೆಯ ಷರತ್ತುಗಳನ್ನು ಪಾಲಿಸಲು ಬದ್ಧರಾಗಿರಬೇಕು. |

ಸವಲತ್ತು / ಸೌಲಭ್ಯಗಳನ್ನು ನೀಡಲು ಆದ್ಯತಾ ಚಟುವಟಿಕೆಗಳು :

1. ರೇಷ್ಮೆ ಬೆಳೆಗಾರರಿಗೆ :
   - ಹಿಪ್ಪುನೇರಳೆ ನರ್ಸರಿ
   - ಹಿಪ್ಪುನೇರಳೆ ತೋಟ ಸ್ಥಾಪನೆ
   - ರೇಷ್ಮೆ ಹುಳು ಸಾಕಾಣಿಕೆ ಮನೆ ನಿರ್ಮಾಣ
   - ಹನಿನೀರಾವರಿ ಘಟಕ ಅಳವಡಿಕೆ
   - ರೇಷ್ಮೆ ಹುಳು ಸಾಕಾಣಿಕೆ ಸಲಕರಣೆಗಳು
   - ಮೌಂಟಿಂಗ್ ಹಾಲ್ ನಿರ್ಮಾಣ

2. ರೇಷ್ಮೆ ನೂಲು ಬಿಚ್ಚಾಣಿಕೆದಾರರಿಗೆ :
   - ಸ್ವಯಂ ಚಾಲಿತ ರೀಲಿಂಗ್ ಘಟಕ ಸ್ಥಾಪನೆ
   - ಮಲ್ಟಿ ಎಂಡ್ ರೀಲಿಂಗ್ ಘಟಕ ಸ್ಥಾಪನೆ
   - ಕಾಟೇಜ್ / ಫಿಲೇಚರ್ ಬೇಸಿನ್ ರೀಲಿಂಗ್ ಘಟಕ ಸ್ಥಾಪನೆ
   - ರೀಲಿಂಗ್ ಶೆಡ್ ನಿರ್ಮಾಣ
   - ನೂತನ ತಂತ್ರಜ್ಞಾನ ಅಳವಡಿಕೆಗೆ ಪೂರಕವಾದಯಂತ್ರೋಪಕರಣಗಳು
   - ಪ್ಯೂಪ ಪ್ರೊಸೆಸ್ಸಿಂಗ್ ಘಟಕ ಸ್ಥಾಪನೆ.

3. ಖಾಸಗಿ ಮೊಟ್ಟೆ ಉತ್ಪಾದಕರಿಗೆ:
   - ದ್ವಿತಳಿ ರೇಷ್ಮೆ ಮೊಟ್ಟೆ ಉತ್ಪಾದನೆಗೆ ಸಲಕರಣೆಗಳು, ಸುತ್ತು ನಿಧಿ, ಮೊಟ್ಟೆ ಪರಿಪಾಕಣೆ ಕೊಠಡಿ, ಕಿರು ಶೈತ್ಯಾಗಾರ ಘಟಕ

4. ಚಾಕಿ ಸಾಕಾಣಿಕೆದಾರರಿಗೆ :
   - ದ್ವಿತಳಿ ಚಾಕಿ ಸಾಕಾಣಿಕೆ ಕೇಂದ್ರ ಸ್ಥಾಪನೆ, ಸಲಕರಣೆ ಹಾಗೂಮೊಟ್ಟೆ ಪರಿಪಾಕಣೆ ಕೊಠಡಿ ಸೇರಿದಂತೆ.

ಪ್ರೋತ್ಸಾಹಧನ ನೀಡಿಕೆ ಕಾರ್ಯಕ್ರಮಗಳು :

- ಬಿತ್ತನೆ ಪ್ರದೇಶದ ಬೋನಸ್ಸ್/ ಪ್ರೋತ್ಸಾಹಧನ, ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ದ್ವಿತಳಿ ಗೂಡಿಗೆ ಸಾಗಾಣಿಕೆ ವೆಚ್ಚ, ದ್ವಿತಳಿ ಚಾಕಿ ವೆಚ್ಚ, ಸೋಂಕು ನಿವಾರಕಗಳು ಮತ್ತು ಕಚ್ಚಾ ರೇಷ್ಮೆಗೆ ಪ್ರೋತ್ಸಾಹಧನ ನೀಡಿಕೆ ಕಾರ್ಯಕ್ರಮಗಳಡಿ ರೇಷ್ಮೆ ಕೃಷಿಯಲ್ಲಿ ನಿರತರಾಗಿರುವ ರೇಷ್ಮೆ ಬೆಳೆಗಾರರು ಮತ್ತು ರೀಲರ್‌ಗಳಿಗೆಕಾಲಕಾಲಕ್ಕೆ ಇಲಾಖೆಯಿಂದ ಹೊರಡಿಸಲಾದ ಮಾರ್ಗಸೂಚಿಗಳನ್ವಯ ಕಾರ್ಯಕ್ರಮ ಅನುಷ್ಠಾನಗೊಳಿಸುವುದು.

**ಫಲಾನುಭವಿ ಆಯ್ಕೆ ಪ್ರಕ್ರಿಯೆ:**

| ಚಟುವಟಿಕೆ | ಅವಧಿ | ಜವಾಬ್ದಾರಿ |
|---|---|---|
| **1.** ನೋಂದಣಿ – ಎಲ್ಲಾ ರೇಷ್ಮೆ ಬೆಳೆಗಾರರು/ರೀಲರುಗಳ ಕುಳುವಾರು ಮಾಹಿತಿಯನ್ನು ಕುಳುವಾರು ವಹಿಯಲ್ಲಿ ದಾಖಲಿಸುವುದು(ಆಧಾರ ಸಂಖ್ಯೆ, ಚುನಾವಣೆ ಗುರುತಿನ ಸಂಖ್ಯೆ, ಬ್ಯಾಂಕ್ ಖಾತೆ, ದೂರವಾಣಿ ಸಂಖ್ಯೆ ಇತ್ಯಾದಿ)<br>**2.** ಪ್ರಚಾರ – ಇಲಾಖೆಯಲ್ಲಿ ಅನುಷ್ಠಾನದಲ್ಲಿರುವ ಫಲಾನುಭವಿ ಆಧಾರಿತ ಕಾರ್ಯಕ್ರಮಗಳ ವ್ಯಾಪಕ ಪ್ರಚಾರ.<br>• ಜಿಲ್ಲಾ ಪಂಚಾಯತ್/ ತಾಲ್ಲೂಕು ಪಂಚಾಯತ್ ವ್ಯಾಪ್ತಿಯಲ್ಲಿ ಕಾರ್ಯಾಗಾರಗಳು, ಗುಂಪು ಚರ್ಚೆ, ಗ್ರಾಮ ಸಭೆ, ವಸ್ತು ಪ್ರದರ್ಶನ, ತರಬೇತಿ, ಕರಪತ್ರ ಮತ್ತು ರೇಷ್ಮೆ ಗೂಡು ಮಾರುಕಟ್ಟೆಗಳಲ್ಲಿ ಫಲಕ ಪ್ರದರ್ಶನ, ವಿವಿಧ ಸಮೂಹ ಮಾಧ್ಯಮಗಳ ಮೂಲಕ ಪ್ರಚಾರ ಹಾಗೂ ವಿಸ್ತರಣಾ ಸಿಬ್ಬಂದಿಗಳು ರೇಷ್ಮೆ ಬೆಳೆಗಾರರೊಂದಿಗೆ ಖುದ್ದು ಭೇಟಿ ಮುಖಾಂತರ ಪ್ರಚಾರ ಕೈಗೊಳ್ಳುವುದು. | ಪ್ರತಿ ಮಾಹೆ<br>• ಏಪ್ರಿಲ್ – ಮೇ ಮಾಹೆಯಲ್ಲಿ ವ್ಯಾಪಕ ಪ್ರಚಾರ.<br>• ಆಗಿಂದಾಗ್ಗೆ ನಡೆಯುವ ಇಲಾಖೆಯ ಸಭೆ ಸಮಾರಂಭಗಳಲ್ಲಿ ಮತ್ತು ಕಾರ್ಯಾಗಾರಗಳಲ್ಲಿ ಪ್ರಚಾರ ಕೈಗೊಳ್ಳುವುದು. | • ಸಂಬಂಧಿಸಿದ ವಿಭಾಗದ ರೇಷ್ಮೆ ಸಹಾಯಕ ನಿರ್ದೇಶಕರು/ ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿಗಳು ಮತ್ತು ವಿಸ್ತರಣಾ ಸಿಬ್ಬಂದಿ.<br>• ರೀಲಿಂಗ್ ಚಟುವಟಿಕೆಗೆ ಸಂಬಂಧಿಸಿದಂತೆ ರೇಷ್ಮೆ ಸಹಾಯಕ ನಿರ್ದೇಶಕರು, ಗೂಡಿನನಂತರದ ಚಟುವಟಿಕೆ / ರೀಲಿಂಗ್ ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿಗಳು ಮತ್ತು ವಿಸ್ತರಣಾ ಸಿಬ್ಬಂದಿ. |
| ಅರ್ಜಿ ಸ್ವೀಕೃತಿ:<br>• ನಿಗದಿತ ಅರ್ಜಿ ನಮೂನೆಯನ್ನು ತಾಂತ್ರಿಕ ಸೇವಾ ಕೇಂದ್ರದ ಮಟ್ಟದಲ್ಲಿ ವ್ಯಾಪಕವಾಗಿ ಲಭ್ಯವಿರುವಂತೆ ನೋಡಿಕೊಳ್ಳುವುದು /ಸೂಚನಾ ಫಲಕಗಳಲ್ಲಿಯೂ ಸಹ ನಮೂನೆಯನ್ನು ಲಭ್ಯವಿರಿಸುವುದು. | ಮೇ ಮಾಹೆಯಿಂದ | • ಸಂಬಂಧಿಸಿದ ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿಗಳು ಮತ್ತು ವಿಸ್ತರಣಾ ಸಿಬ್ಬಂದಿ.<br>• ರೀಲಿಂಗ್: ಸಂಬಂಧಿಸಿದ ರೇಷ್ಮೆ ವಿಸ್ತರಣಾಧಿಕಾರಿ/ರೇಷ್ಮೆ ಸಹಾಯಕ ನಿರ್ದೇಶಕರು |

| ಚಟುವಟಿಕೆ | ಅವಧಿ | ಜವಾಬ್ದಾರಿ |
|---|---|---|
| ಅರ್ಜಿ ಸ್ವೀಕೃತಿ ಮತ್ತು ನೋಂದಣಿ:<br>• ಫಲಾನುಭವಿಗಳಿಂದ ಅರ್ಜಿಗಳನ್ನು ಸ್ವೀಕರಿಸಿ, ನೋಂದಾಯಿಸಿಕೊಂಡು ಸ್ವೀಕೃತಿ ನೀಡುವುದು. | ಮೇ ಮಾಹೆಯಲ್ಲಿ ಪೂರ್ಣಗೊಳಿಸುವುದು | • ಸಂಬಂಧಿಸಿದ ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿಗಳು ಮತ್ತು ವಿಸ್ತರಣಾ ಸಿಬ್ಬಂದಿ.<br>• ರೀಲಿಂಗ್: ಸಂಬಂಧಿಸಿದ ರೇಷ್ಮೆ ವಿಸ್ತರಣಾಧಿಕಾರಿ/ರೇಷ್ಮೆ ಸಹಾಯಕ ನಿರ್ದೇಶಕರು |
| ಅರ್ಜಿ ಪರಿಶೀಲನೆ ಮತ್ತು ಫಲಾನುಭವಿ ಪಟ್ಟಿ ತಯಾರಿಕೆ :<br>• ಸಂಬಂಧಿಸಿದ ರೇಷ್ಮೆ ಸಹಾಯಕ ನಿರ್ದೇಶಕರು, ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿಗಳು, ರೇಷ್ಮೆ ನಿರೀಕ್ಷಕರು/ಪ್ರದರ್ಶಕರು/ಪ್ರವರ್ತಕರು ಮತ್ತು ಅರ್ಜಿದಾರರನ್ನು ಒಳಗೊಂಡಂತೆ ತಾಂತ್ರಿಕ ಸೇವಾ ಕೇಂದ್ರವಾರು ಅಥವಾ ತಾಲ್ಲೋಕುವಾರು ಸಭೆ ನಡೆಸಿ ಇಲಾಖೆಯಿಂದ ನೀಡಿರುವ ಮಾರ್ಗಸೂಚಿಗಳನ್ನು ಅನುಸರಿಸಿ ಅರ್ಜಿದಾರರ ಅರ್ಜಿಗಳನ್ನು ಪರಿಶೀಲಿಸಿ ಅರ್ಹತೆಗಳಿಗೆ ಅನುಸಾರವಾಗಿ ಫಲಾನುಭವಿಗಳನ್ನು ಗುರುತಿಸಿ ಶ್ರೇಣೀಕರಿಸಿ ನೀಡಿರುವ ಗುರಿಗಳಿಗೆ ಅನುಗುಣವಾಗಿ ಹಾಗೂ ಲಭ್ಯವಿರುವ ಅನುದಾನಕ್ಕೆ ತಕ್ಕಂತೆ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡುವುದು.<br>• ಫಲಾನುಭವಿ ಪಟ್ಟಿಯನ್ನು ಸಂಬಂಧಿಸಿದ ರೇಷ್ಮೆ ಸಹಾಯಕ ನಿರ್ದೇಶಕರು ಅನುಮೋದಿಸುವುದು.<br>• ಅನುಮೋದಿತ ಫಲಾನುಭವಿ ಪಟ್ಟಿಯನ್ನು ತಾಂತ್ರಿಕ ಸೇವಾ ಕೇಂದ್ರಗಳ ಸೂಚನಾ ಫಲಕದಲ್ಲಿಪ್ರಕಟಿಸುವುದು.<br>• ಅನುಮೋದಿತ ಫಲಾನುಭವಿ ಪಟ್ಟಿಯನ್ನು ಸಂಬಂಧಿಸಿದ ರೇಷ್ಮೆ ಉಪನಿರ್ದೇಶಕರಿಗೆ ಸಲ್ಲಿಸುವುದು. | ಜೂನ್ ಮಾಹೆಯಲ್ಲಿ ಪೂರ್ಣಗೊಳಿಸುವುದು | • ಸಂಬಂಧಿಸಿದ ವಿಭಾಗದ ರೇಷ್ಮೆ ಸಹಾಯಕ ನಿರ್ದೇಶಕರು / ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿಗಳು ಮತ್ತು ವಿಸ್ತರಣಾ ಸಿಬ್ಬಂದಿ – ಗೂಡಿನ ಪೂರ್ವದ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಫಲಾನುಭವಿ ಆಯ್ಕೆ ಪಟ್ಟಿ ಅನುಮೋದನೆಯನ್ನು ಸಂಬಂಧಿಸಿದ ವಿಭಾಗದ ರೇಷ್ಮೆ ಸಹಾಯಕ ನಿರ್ದೇಶಕರು ಮಾಡಬೇಕು.<br>• ರೀಲಿಂಗ್ – ಸಂಬಂಧಿಸಿದ ವಿಭಾಗದ ರೇಷ್ಮೆ ಸಹಾಯಕ ನಿರ್ದೇಶಕರು / ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿಗಳು ಮತ್ತು ವಿಸ್ತರಣಾ ಸಿಬ್ಬಂದಿ – ಗೂಡಿನ ನಂತರದ ಚಟುವಟಿಕೆಗೆ ಸಂಬಂಧಿಸಿದಂತೆ ಫಲಾನುಭವಿ ಪಟ್ಟಿ ತಯಾರಿಸಿ ಸಂಬಂಧಿಸಿದ ರೇಷ್ಮೆ ಸಹಾಯಕ ನಿರ್ದೇಶಕರು / ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿಗಳು PCSC ಸಮಿತಿಗೆ ಅನುಮೋದನೆಗೆ ಸಲ್ಲಿಸಬೇಕು.PCSC ಸಮಿತಿಯಿಂದಅನುಮೋದನೆ ಪಡೆದ ನಂತರ ಮುಂದಿನ ಪ್ರಕ್ರಿಯೆ ಜರುಗಿಸುವುದು. |

**ಮಂಜೂರಾತಿ ಪ್ರಕ್ರಿಯೆ :**

ಕೇಂದ್ರ ಕಚೇರಿಯಿಂದ ನೀಡಿರುವ ಕಾರ್ಯಕ್ರಮವಾರು ಮಾರ್ಗಸೂಚಿಗಳನ್ವಯ ಸೂಕ್ತ ಪ್ರಸ್ತಾವನೆಗಳನ್ನು ಸಂಬಂಧಿಸಿದ ತಾಂತ್ರಿಕ ಸೇವಾ ಕೇಂದ್ರದ ರೇಷ್ಮೆ ವಿಸ್ತರಣಾಧಿಕಾರಿಗಳು ತಯಾರಿಸಿ ಆರ್ಥಿಕ ಪ್ರತ್ಯಾಯೋಜನೆಯನ್ವಯ ಸಕ್ಷಮ ಮಂಜೂರಾತಿ ಪ್ರಾಧಿಕಾರಕ್ಕೆ ಸಲ್ಲಿಸುವುದು.

ಸಕ್ಷಮ ಪ್ರಾಧಿಕಾರದಿಂದ ಮಂಜೂರಾತಿ ಪಡೆದನಂತರ ಅನುದಾನ ಲಭ್ಯತೆಗೆ ಅನುಗುಣವಾಗಿ, ಖಜಾನೆಗೆ ಬಿಲ್ಲುಗಳನ್ನು ಸಲ್ಲಿಸಿ ಫಲಾನುಭವಿ ಬ್ಯಾಂಕ್ ಖಾತೆಗೆ ನೇರವಾಗಿ ಅರ್ಹ ಸಹಾಯಧನ ಮೊತ್ತವನ್ನು ಜಮಾ ಮಾಡುವುದು.

ತಾಂತ್ರಿಕ ಸೇವಾ ಕೇಂದ್ರಗಳಲ್ಲಿ ಫಲಾನುಭವಿಗಳು ಪಡೆದಿರುವ ಸೌಲಭ್ಯಗಳ ವಿವರಗಳನ್ನು ಕುಳುವಾರು ವಹಿಯಲ್ಲಿ ದಾಖಲಿಸಿ ನಿರ್ವಹಿಸುವುದು.

ಈ ಮೇಲಿನ ನಿರ್ದೇಶನಗಳನ್ನು ಅನುಸರಿಸಿ ಕ್ಷೇತ್ರಮಟ್ಟದಲ್ಲಿ ಫಲಾನುಭವಿ ಆಧಾರಿತ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಅನುಷ್ಠಾನ ಮಾಡಲು ಸೂಚಿಸಿದೆ.

6/6

**ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು**
**ಹಾಗೂ ರೇಷ್ಮೆ ನಿರ್ದೇಶಕರು**

ಅಪರ ನಿರ್ದೇಶಕರು(ತಾಂತ್ರಿಕ) ಹಾಗೂ (ಆಡಳಿತ)
ಎಲ್ಲಾ ರೇಷ್ಮೆ ಜಂಟಿ ನಿರ್ದೇಶಕರು
ಸಹಕಾರ ಸಂಘಗಳ ಜಂಟಿ ನಿಬಂಧಕರು(ರೇಷ್ಮೆ)
ಎಲ್ಲಾ ರೇಷ್ಮೆ ಉಪನಿರ್ದೇಶಕರು, ಜಿಲ್ಲಾ ಪಂಚಾಯತ್, ಮಾಗಡಿ/ಕುಣಿಗಲ್
ಎಲ್ಲಾ ರೇಷ್ಮೆ ಸಹಾಯಕ ನಿರ್ದೇಶಕರು
ಎಲ್ಲಾ ರೇಷ್ಮೆ ವಿಸ್ತರಣಾಧಿಕಾರಿಗಳು